idea of the Government was to locate the Central Asylum in the military quarters left over by the Military authorities in Kolar?

The Hon'ble Sri K. T. BHASHYAM.—We have thought of several schemes like that. Some of them had to be deferred for various considerations, chiefly want of money.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ)—ನಿಮ್ಮ ಪಂಗಡ).—ಹಣ ಇಲ್ಲದೇ ಇರುವುದರಿಂದ ತಾನೇ ಈ ಆಸ್ಪತ್ರೆಗಳನ್ನು ಹೆಚ್ಚಾಗಿ ತೆಗೆಯುವುದಕ್ಕಾಗುವುದಿಲ್ಲ ಎಂದುಹೇಳುತ್ತಿದ್ದಿರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು—ಮುಕ್ಯಾಲು ಪಾಲು ಅದೇ ಕಾರಣ.

ಶ್ರಿ ಟಿ. ಹನುಮಯ್ಯನವರು.—ಈಗ ಪಟ್ಟಣದಲ್ಲಿ ರತಕ್ಕ ಆಸ್ಪತ್ರೆಗಳನ್ನು ಮುಚ್ಚಿ ಈ ರೋಗ ಇರುವ ಕಡೆಗಳಲ್ಲಿ ಕೇವು ಆಸ್ಪತ್ರೆಗಳನ್ನು ತೆಗೆಯುವುದು ಒಳ್ಳೆಯದಲ್ಲವೇ?

The Hon'ble Sri K. T. BHASHYAM.—That is a matter of opinion.

Mr. SPEAKER :—Question time is over.

SHORT NOTICE QUESTIONS AND ANSWERS.

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).—ಈಗ 4ನೇ ನಂಬರಿನ ಅಲ್ಪಕಾಲಾವಧಿಯ ಸ್ಪಶ್ನೆಯನ್ನು ತೆಗೆದು ಕೊಳ್ಳಿರಾಗುತ್ತದೆ.

Non-acceptance of the recommendation of the House by Election Commissioner regarding Voting by Colour Box System.

Q.—4. **Sri V. S. NARAYANA RAO** (Bangalore District—General)·—

Will the Government be pleased to state :—

(*a*) whether it is a fact that the Election Commissioner of India has refused to accept the recommendation of this House and the Government in the matter of "voting by colour box system.";

(*b*) the extent to which it will affect the arrangements so far made like the manufacture of ballot boxes, etc.;

(*c*) the system suggested by the Election Commission?

A.—**The Hon'ble Sri K. T. BHASHYAM** (Minister for Law and Labour).—

(*a*) At the Conference of Chief Electoral Officers held at Delhi the general concensus of opinion was not in favour of colour box system as it may be difficult for ordinary voters to distinguish between different colours more specially when the number of candidates is large. It was a decision taken by a general concensus of opinion and no question of the Chief Election Commissioner of India refusing to accept the recommendation of the House arises;

(*b*) The manufacturing of ballot boxes is not affected at all by the non-acceptance of the colour box system.

(*c*) The system of symbols has been preferred to the colour box system. According to this system each candidate will have a symbol which shall be pasted both inside and outside the box allotted to each candidate.

It is obvious from the above that the system now approved is not in essence very much different from that of the colour box. For, instead of allotting a box with a specific colour to each candidate he is now allotted a box with a specific symbol which is easily recognised by the ordinary voter.

ಶ್ರೀ ವಿ. ಎಸ್. ನಾರಾಯಣರಾಯರು.—ಕಲರ್ ಬಾಕ್ಸ್ ಸಿಸ್ಟಂನಲ್ಲಿ ಒಂದೊಂದು ಪಾರ್ಟಿಗೆ ಒಂದೊಂದು ಚಿನ್ಹೆ ಹಾಕಬೇಕೆಂದು ತಾನೆ ಸೂಚಿಸಿರುವುದು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಂದೊಂದು ಪಾರ್ಟಿಗೆ ಅಂತ ಅಲ್ಲ, ಒಂದೊಂದು ಕ್ಯಾಂಡಿಡೇಟ್‌ಗೆ ಅಂತ. ನಾವು ನುಮ್ಮನೆ ಕಲರ್‌ಬಾಕ್ಸ್ ಸಿಸ್ಟಂ ಅಂತ ಹೇಳಿದ್ದೆವು, ವಿವರಗಳನ್ನು ಸೂಚಿಸಿರಲಿಲ್ಲ.

ಶ್ರೀ ವಿ. ಎಸ್. ನಾರಾಯಣರಾಯರು.—ಈ ಚಿನ್ಹೆ ನೋಡುತ್ತಲೇ ಇಂಥಾ ವ್ಯಕ್ತಿ ಇಂಥಾ ಪಾರ್ಟಿಗೆ ಸೇರಿದವರು ಎಂದು ಹೇಳುವುದಕ್ಕಾಗುತ್ತದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಚಿನ್ಹೆಗಳನ್ನು ಕೊಡುತ್ತೇವೆ. ಯಾವ ಯಾವ ಕ್ಯಾಂಡಿಡೇಟ್ ಯಾವ ಯಾವ ಪಾರ್ಟಿಗೆ ಸೇರಿದವರು ಎಂಬುದನ್ನು ಓಟರುಗಳು ತಿಳಿದುಕೊಳ್ಳಬೇಕು.

ಶ್ರೀ ವಿ. ಎಸ್. ನಾರಾಯಣರಾಯರು.—ಒಬ್ಬರಿಗೆ ಕೊಟ್ಟ ಚಿನ್ಹೆಯನ್ನು ಇನ್ನೊಂದು ಕಡೆ ಬೇರೆ ಇನ್ನೊಬ್ಬರಿಗೆ ಕೊಡಬಹುದಲ್ಲವೇ?

ಮಾನ್ಯಶ್ರೀ ಕೆ. ಟಿ. ಭಾಷ್ಯಂರವರು.—ಕೊಡಬಹುದು, ಆಯಾಯ ಸ್ಥಳದಲ್ಲಿ ಇಂತಿಂಥವರಿಗೆ ಇಂತಿಂಥಾ ಚಿನ್ಹೆ ಎಂಬುದಾಗಿ ಕೊಡುತ್ತೇವೆ.

ಶ್ರೀ ವಿ. ಎಸ್. ನಾರಾಯಣರಾಯರು.—ಅದರಿಂದ ತೊಂದರೆಯಾಗುವುದಿಲ್ಲವೇ?

The Hon'ble Sri K. T. BHASHYAM.—That is a matter of opinion.

ಶ್ರೀ ವಿ. ಎಸ್. ನಾರಾಯಣರಾಯರು.—ಈಗ ಆ ಚಿನ್ನೆಗಳನ್ನು ಪೆಟ್ಟಿಗೆಗಳ ಮೇಲೆ ಯಾವ ರೀತಿ ಹಾಕುತ್ತೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಂದು ನಣ್ಣ ಟಿಕೆಟ್ ತರಹ ಇರುತ್ತದೆ. ಅದನ್ನು ಯಾವ ಪೆಟ್ಟಿಗೆಗೆ ಬೇಕೋ ಅದಕ್ಕೆ ಹಾಕಬಹುದು. ಕಲರ್ ಬಾಕ್ಸ್ ಇದ್ದರೆ 8–10 ಇರುವ ಕಡೆ ಬಣ್ಣ ವ್ಯತ್ಯಾಸವಾಗುತ್ತದೆ ಗುರುತಿಸುವುದಕ್ಕಾಗುವುದಿಲ್ಲವೆಂದು ಚಿನ್ನೆ ಇಟ್ಟುಕೊಳ್ಳೋಣ ಎಂದು ಹೇಳಿದ್ದಾರೆ.

ಶ್ರೀ ವಿ. ಎಸ್. ನಾರಾಯಣರಾಯರು.— ಓಟು ಮಾಡುವ ಟಿಕೆಟ್ ತೆಗೆದುಕೊಳ್ಳುವಾಗಲೇ ಯಾವುದಕ್ಕೆ ಹಾಕಬೇಕೆಂದು ಗೊತ್ತಾಗುತ್ತದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಪೆಟ್ಟಿಗೆಮೇಲೆ ಚಿನ್ನೆ ಇರುತ್ತದೆಯೇ ಹೊರತು ಟಿಕಟ್ಟು ಮೇಲೆ ಏನೂ ಇರುವುದಿಲ್ಲ.

ಶ್ರೀ ವಿ. ಎಸ್. ನಾರಾಯಣರಾಯರು.—ಈಗಾಗಲೇ ಪೆಟ್ಟಿಗೆಗಳಿಗೆ ಆರ್ಡರ್ ಕೊಟ್ಟಿದ್ದೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೊಟ್ಟಿದೆ.

ಶ್ರೀ ವಿ. ಎಸ್. ನಾರಾಯಣರಾಯರು.—ಎಷ್ಟು ದಿವಸವಾಯಿತು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆರ್ಡರ್, ಆಗಿ ಹತ್ತು ಹದಿನೈದು ದಿನವಾಯಿತು.

ಶ್ರೀ ವಿ. ಎಸ್. ನಾರಾಯಣರಾಯರು.— ಎಷ್ಟು ಜನರು ಟೆಂಡರ್ ಕೊಟ್ಟಿದ್ದರು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಐದಾರು ಜನರು ಕಳುಹಿಸಿದ್ದರು. ಅದಕ್ಕೆ ಇಂಡಿಯಾ ಸರ್ಕಾರದ ಅಂಗೀಕಾರ ಅವಶ್ಯಕ, ಅದನ್ನೂ ಕೊಟ್ಟಿದ್ದಾರೆ. ಯಾರು ಕಡಿಮೆ ಖರ್ಚಿನಲ್ಲಿ ಮಾಡಿಕೊಡುವುದಕ್ಕೆ ಒಪ್ಪಿರುತ್ತಾರೋ ಅವರಿಗೆ ಕೆಲಸವನ್ನು ಕೊಡುತ್ತೇವೆ.

ಶ್ರೀ ವಿ. ಎಸ್. ನಾರಾಯಣರಾಯರು.—ಯಾರು ಯಾರು ಟೆಂಡರ್ ಕೊಟ್ಟಿರುವುದು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ವಿ. ಎಸ್. ನಾರಾಯಣರಾಯರು.—ಯಾರಿಗೆ ಕೊಟ್ಟಿದ್ದೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದನ್ನೂ ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಓಟರುಗಳಿಗೆ ಅದಷ್ಟು ನುಲಭವಾಗಿರಬೇಕೆಂಬ ಉದ್ದೇಶದಿಂದ ಸರ್ಕಾರದವರು ಈ ರೀತಿ ಮಾಡಬೇಕಾಯಿತಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಬಿ. ಚನ್ನಬೈರೇಗಾಡರು.—ಬಣ್ಣದ ಪೆಟ್ಟಿಗೆ ಪದ್ಧತಿಯಲ್ಲಿ ಏಳೆಂಟು ಬಣ್ಣಗಳಿದ್ದರೆ ಓಟರುಗಳಿಗೆ ಗೊತ್ತಾಗುವುದು ಕಷ್ಟವಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಬಿ. ಚನ್ನಬೈರೇಗೌಡರು.—ಅದುದರಿಂದಲೇ ಅಲ್ಲವೆ ಅದನ್ನು ತಪ್ಪಿಸಿ ಈ ರೀತಿ ಮಾಡಿರುವುದು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಎಂ. ಎಸ್. ಜೋಯಿಸರು (ಮೈಸೂರು ಜಿಲ್ಲೆ).—ಪೆಟ್ಟಿಗೆಗಳಿಗೆ ಟೆಂಡರ್ ಕರೆದು ಆರ್ಡರ್ ಕೊಟ್ಟಿದ್ದೇವೆಂದು ಹೇಳಿದಿರಿ, ಮೈಸೂರಿನವರಿಗೆ ಕೊಟ್ಟಿದ್ದೀರೋ ಅಥವ ಹೊರಗಿನವರಿಗೆ ಕೊಟ್ಟಿದ್ದೀರೋ?

The Hon'ble Sri K. T. BHASHYAM.—It is cross-examination, Sir.

Sri M. N. JOIS.—It is an information that I want.

The Hon'ble Sri K. T. BHASHYAM.—Probably they have a branch here, I do not know.

Sri M. N. JOIS.—I would like to know whether it is a Company in Mysore State or outside Mysore State?

The Hon'ble Sri K. T. BHASHYAM.—As I said, I could not disclose the name of the company.

Sri M. N. JOIS.—I do not want the name of the company. I only want to know whether the company is in Mysore State or is it outside the State?

The Hon'ble Sri K. T. BHASHYAM.—I have no idea.

Sri M. N. JOIS.—Is it a company started on the principle of cottage industries or big industries?

The Hon'ble Sri K. T. BHASHYAM.—I have no idea

ಶ್ರೀ ಎಚ್. ಸಿ. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—Symbols ದೊಡ್ಡದಾಗಿ ಪೆಟ್ಟಿಗೆ ಸೈಡಿಗೆ ನರಿಯಾಗಿ ಮಾಡಿಸುತ್ತಿರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನರಿಯಾಗಿ ಕಾಣುವಹಾಗೆ ಮಾಡಿಸುತ್ತೇವೆ.

Mushir-ul-Mulk J. MOHAMED IMAM (Chitaldrug *cum* Tumkur—Muslim).—Who is the authority that accepts the tender?

The Hon'ble Sri K. T. BHASHYAM.—So far as the State is concerned, the Government of Mysore.

Janab J. MOHAMED IMAM.—Have you selected the lowest or the highest?

The Hon'ble Sri K. T. BHASHYAM.—The lowest on the date on which the order was placed.

Janab J. MOHAMED IMAM.—Have you not received any more tenders?

The Hon'ble Sri K. T. BHASHYAM.—We have received after that date.

Janab J MOHAMED IMAM.—Is it not lower than the one accepted?

The Hon'ble Sri K. T. BHASHYAM.—It is a little lower.

Janab J. MOHAMED IMAM.—Why was it not accepted?

The Hon'ble Sri K. T. BHASHYAM.—Because, after the date of the tender we cannot go back.

Janab J. MOHAMED IMAM.—Did anybody from within the State offer the lowest tender?

The Hon'ble Sri K. T. BHASHYAM.— I have no idea.

Janab J. MOHAMED IMAM.—Is there anything that prevents the Government from accepting the tender of a person who is a Mysorean even though his tender is a little more than the tender submitted by an outsider?

The Hon'ble Sri K. T. BHASHYAM.— Well Sir, we have placed an order and if somebody offers later on, we cannot go back on the order.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—Symbols ಎಂದರೆ, ಚಿಹ್ನೆಗಳಲ್ಲಿ ನ್ಯಾಷನಲ್ ಬಾಪುಟ ಮತ್ತು ಚರಕಗಳಿರುತ್ತವೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಂಡಿಯಾ ಸರ್ಕಾರದವರು ಯಾವಯಾವುದಿರಬೇಕೆಂದು ತಿಳಿಸುತ್ತಾರೋ, ಅದರ ಪ್ರಕಾರ ಇರುತ್ತದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಅದರಲ್ಲಿ ಹುಲಿ ಸಿಂಹದ ಚಿಹ್ನೆ ಇರುತ್ತದೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇನ್ನೂ ಗೊತ್ತಿಲ್ಲ.

Mr. SPEAKER.— Next Short Notice Question by Sri H. K. Veeranna Gowda.

Resignation of Sri B. S. Narasinga Rao, Advisor to Government.

Q. No. 8.—**Sri H. K. VEERANNA GOWDA** (Mandya District—General).—

Will the Government be pleased to state:—

(*a*) whether it is a fact that Sri B. S. Narasinga Rao, Advisor to Government, has resigned his post the next day an interpellation regarding his appointment as Advisor was discussed on the floor of this House?

(*b*) whether they are aware that the services of such an experienced officer as Sri B. S. Narasinga Rao are absolutely necessary in the satisfactory carrying out of the major irrigation project now undertaken by Government at very huge cost;

(*c*) whether they have made any effort to retain the services of Sri Narasinga Rao in the larger interests of the State?

A.—**The Hon'ble Sri T. MARIAPPA** (Home Minister).—

(*a*) Yes.

(*b*) Yes.

(*c*) His resignation has been accepted as he wanted to be relieved of his duties before 31st March 1951.

ಶ್ರೀ ಎಚ್. ಕೆ. ವೀರಣ್ಣಗೌಡರು.—ಈ ಪ್ರಶ್ನೆಯ (ಎ) ಮತ್ತು (ಬಿ) ಭಾಗಕ್ಕೆ 'yes' ಎಂದು ಉತ್ತರ ಕೊಡಲಾಗಿದೆ, ಅವರು ರಾಜಿನಾಮೆ ಕೊಡಲು ಕಾರಣವನ್ನು ಕೊಟ್ಟಿದ್ದಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೊಟ್ಟಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಏನು ಕಾರಣ ಕೊಟ್ಟಿದ್ದಾರೆ?

The Honb'le Sri T. MARIAPPA.— "I was deeply dispressed by the questions put in the House; therefore, kindly relieve me of my duty before the 31st March" ಎಂದು ಹೇಳಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಅವರ ಸರ್ವಿಸಸ್ ಬಹಳ ಅಗತ್ಯ ಎಂದು ಉತ್ತರ ಕೊಟ್ಟಿದ್ದೀರಿ. ಆದರೂ ಅವರು ರಾಜಿನಾಮೆ ಕೊಟ್ಟಿರುವುದರಿಂದ ಈಗ ಬೇರೆಯವರನ್ನು ಆ ಸ್ಥಳಕ್ಕೆ ನೇಮಿಸುವ ಯೋಚನೆ ಇದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅವರು ರಾಜಿನಾಮೆ ಕೊಟ್ಟಿರುವುದು ನಿಜ; ಬೇರೆ ಏರ್ಪಾಡಿನ ವಿಚಾರ ಯೋಚನೆ ಮಾಡುತ್ತಿದ್ದೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಅವರನ್ನು ಉಳಿಸಿಕೊಳ್ಳಲು ಪ್ರಯತ್ನಪಟ್ಟಿದ್ದೀರಾ ಎಂದು ಕೇಳಿರುವುದಕ್ಕೆ ಅವರ ರಾಜೀನಾಮೆಯನ್ನು ಒಪ್ಪಿದ್ದೇವೆ ಎಂದು ಉತ್ತರ ಕೊಡಲಾಗಿದೆ, ಇದೇ ಪ್ರಯತ್ನವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಂತಹ ವಾತಾವರಣದಲ್ಲಿ ನಾನು ಇನ್ನು ಮುಂದೆ ಇರುವುದಕ್ಕೆ ಇಷ್ಟವಿಲ್ಲ, ನನ್ನನ್ನು ರಿಲೀವ್ ಮಾಡಬೇಕೆಂದು ಹೇಳಿದರು. ಅದರಿಂದ ರಿಲೀವ್ ಮಾಡಿದ್ದೇವೆ.

ಶ್ರೀ ಎಚ್. ಕೆ. ವೀರಣ್ಣಗೌಡರು.— ಒಪ್ಪಿಕೊಳ್ಳುವುದೇ ಪ್ರಯತ್ನವೋ ಅಥವ ಬೇರೆ ಪ್ರಯತ್ನವನ್ನೂ ಮಾಡಿದ್ದೀರೊ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ ಪ್ರಶ್ನೆಗಳನ್ನು ಕೇಳಿದರೂ ಸರ್ಕಾರದವರು defend ಮಾಡಿದೆವು ಎಂದು ಹೇಳಿದೆವು; ಆದರೂ ಕೂಡ I feel greatly hurt, ನನಗೆ ಇರಲು ಇಷ್ಟವಿಲ್ಲ ಎಂದು ಖಚಿತವಾಗಿ ಅವರು ಹೇಳಿದುದರಿಂದ ನಾವು ಒಪ್ಪಬೇಕಾಯಿತು.

ಶ್ರೀ ಎಲ್. ಎಚ್. ತಿಪ್ಪಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ-ನಿಮ್ನ ಪಂಗಡ).— ಚೆಕ್ನಿಕಲ್ ನಾಲೆಡ್ಜ್ ಇರುವವರು ಬೇಕಾದಷ್ಟು ಜನರಿದ್ದಾರೆ, ಅವರನ್ನು ಸಮಿತಿಗೆ ಹಾಕಿಕೊಳ್ಳಲು ಸಾಧ್ಯವಿಲ್ಲವೆ?

Mr. SPEAKER.—That question does not arise.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).— ಈ ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿದುದರಿಂದ ಅವರಿಗೆ ದುಃಖವಾಯಿತೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಹೌದು.

ಶ್ರೀ ಬಿ. ಹುಚ್ಚೇಗೌಡರು.— ಈ ಸಭೆಯಲ್ಲಿ ಪ್ರಶ್ನೆ ಹಾಕಿದರೆ ದುಃಖವಾಗುತ್ತದೆಂದು ಕೇಳುವುದನ್ನೇ ಬಿಟ್ಟು ಬಿಡುವುದಕ್ಕಾಗುತ್ತದೆಯೆ; ಅದು ಹೋಗಲಿ, ಈಗ ಮೂರು ಜನ ಚೀಫ್ ಇಂಜಿನಿಯೆರುಗಳಿದ್ದಾರೆಯೆ?